Extension of Prohibition (closing of toddy shops at Arsikere).

Q.—594. **Sri Y. M. CHANDRASEKHARIAH** (Kadur).—

Will the Government be pleased to state :—

(*a*) the number of Districts to which Prohibition would be introduced during the year 1955-56 ;

(*b*) whether they contemplate introduction of complete Prohibition throughout Hassan District ;

(*c*) whether it has not come to thier notice that due to existence of toddy shops at Arsikere, toddy is being transported to Kadur Taluk which is a prohibited area ;

(*d*) whether they are aware that Prohibition would come into effect in all places from Bangalore to Harihar if they close the toddy shops at Arsikere ;

(*e*) whether they would close the toddy shops at Arsikere this year ?

A.—**Sri T. CHANNIAH** (Minister for Public Health and Local Self-Government).—

(*a*) None.

(*b*) Does not arise.

(*c*) No.

(*d*) No. There are toddy shops on Bangalore-Harihar Road in Nelamangala Taluk, bordering Tumkur District in addition to the toddy shop at Arsikere between Bangalore and Harihar.

(*e*) No.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಬೆಂಗಳೂರು-ಹೊನ್ನಾವರ ರೋಡಿನಲ್ಲಿ ಅರಸೀಕೆರೆ ಬಿಟ್ಟರೆ ಬೆಂಗಳೂರು ಡಿಸ್ಟ್ರಿಕ್ಟ್ ಗಡಿಗೆ ಬರುವವರೆಗೂ ಎಲ್ಲಿಯೂ ಹೆಂಡದ ಅಂಗಡಿ ಇಲ್ಲವೆಂಬುದು ಸರ್ಕಾರದ ಗಮನದಲ್ಲಿದೆಯೇ ?

ಶ್ರೀ ಟಿ. ಚನ್ನಯ್ಯ.—ನೆಲಮಂಗಲದಲ್ಲಿ ಇದೆ. On the road from Bangalore to Harihar, there is another toddy shop within the limits of Nelamangala Taluk.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಬೆಂಗಳೂರು ಡಿಸ್ಟ್ರಿಕ್ಟಿನ ಗಡಿಯವರೆಗೆ ಅರಸೀಕೆರೆ ಬಿಟ್ಟರೆ ಇನ್ನು ಎಲ್ಲಾದರೂ ಇದೆಯೇ ?

ಶ್ರೀ ಟಿ. ಚನ್ನಯ್ಯ.—ಇಲ್ಲ. ಆದರೆ ಬೆಂಗಳೂರು ಡಿಸ್ಟ್ರಿಕ್ಟ್‌ಗೆ ಸಂಬಂಧಪಟ್ಟ ನೆಲಮಂಗಲದ ತಾಲ್ಲೂಕಿನಲ್ಲಿ ಇದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಅಲ್ಲಿಂದ ಇಲ್ಲಗೆ ಬರಬೇಕಾದರೆ 250 ಮೈಲಿ ಆಗುತ್ತದೆ. ಈ 250 ಮೈಲಿಗಳಲ್ಲಿ ಅರಸೀಕೆರೆಯನ್ನು ಬಿಟ್ಟರೆ ಯಾವುದೂ ಇಲ್ಲ. ಅರಸೀಕೆರೆ ಮಧ್ಯಪ್ರದೇಶವಾಗಿರುವುದರಿಂದ ಹೆಂಡ ಸಾಗಾಣಿಕೆ 20 ಮೈಲಿ ವಿಸ್ತೀರ್ಣದವರೆಗೆ ಆಗುತ್ತದೆಂಬುದು ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಬಂದಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಅರಸೀಕೆರೆ—ಕಡೂರಿನಲ್ಲಿ ಪೋಲೀಸ್ ಇಲಾಖೆಯವರು ಸೇರಿಕೊಂಡು ತಾಲ್ಲೂಕ್ ಹೆಡ್‌ಕ್ವಾರ್ಟರ್ಸ್‌ನಲ್ಲಿ ಸಾಗಾಣಿಕೆ ಮಾಡುತ್ತಾರೆಂಬುದು ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಬಂದಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಪೋಲೀಸ್ ನವರು ಟ್ರಂಕಿನಲ್ಲಿಟ್ಟುಕೊಂಡು ಬೇರೆ ಕಡೆ ಮಾರುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ಬಂದಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಅರಸೀಕೆರೆ ತಾಲ್ಲೂಕಿನಲ್ಲಿ ಒಂದು ವರ್ಷಕ್ಕೆ ಹೆಂಡ ಮತ್ತು liquor ಹರಾಜಿನಿಂದ ಎಷ್ಟು ಉತ್ಪತ್ತಿಯಾಗುತ್ತಿದೆ ?

ಶ್ರೀ ಟಿ. ಚನ್ನಯ್ಯ.—ನೋಟೀಸ್ ಬೇಕು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಅರಸೀಕೆರೆ ತಾಲ್ಲೂಕ್ ಕಡೂರ್ ತಾಲ್ಲೂಕ್‌ಗೆ border ಆಗಿದೆ. ಅರಸೀಕೆರೆ ತಾಲ್ಲೂಕ್ ಮತ್ತು ಕಡೂರ್ ತಾಲ್ಲೂಕಿನ ಬಾರ್ಡರ್‌ಗಳಲ್ಲಿ ಕೆಲವು ಅಂಗಡಿಗಳಲ್ಲಿ ಹೆಂಡ ಮಾರುತ್ತಿದ್ದಾರೆಂಬುದು ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಬಂದಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಅನೇಕಸಾರಿ ತಾವುಗಳು ಅಲ್ಲಿಗೆ ಬಂದಾಗ ಜನಗಳು ಈ ರೀತಿ ಮಾರುತ್ತಿದ್ದಾರೆಂದು ತಮ್ಮ ಗಮನಕ್ಕೆ ತಂದಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ಒಂದೆರಡು ಸಾರಿ representations ಮೂಲಕ ಮಾನ್ಯಸದಸ್ಯರೇ ಅದನ್ನು ಸರ್ಕಾರಕ್ಕೆ ತಿಳಿಸಿದ್ದಾರೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಅರಸೀಕೆರೆ ತಾಲ್ಲೂಕಿನಲ್ಲಿ ಹೆಂಡದ ಅಂಗಡಿಗಳನ್ನು ತೆರೆಯುವುದರಿಂದ ಹೆಚ್ಚು ಕಡಮೆ ಮೂನೂರು ಡಿಸ್ಟ್ರಿಕ್ಟಿನಲ್ಲಿ ¾ ಭಾಗ ಎಲ್ಲಿಯೂ ಸಾರಾಯಿ, ಹೆಂಡ, ಇಲ್ಲವೆಂಬುದು ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಬಂದಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಅರಸೀಕೆರೆ ತಾಲ್ಲೂಕು ನಾಲ್ಕು Prohibited ಜಿಲ್ಲೆಗಳ ಮಧ್ಯೆ ಇಲ್ಲವೇ ?

ಶ್ರೀ ಟಿ. ಚನ್ನಯ್ಯ.—ಇದೆ.

ಶ್ರೀ ಬಿ. ಹುಚ್ಚೇಗೌಡ.—ಈಗ ಅರಸೀಕೆರೆ ನುತ್ತ ಹಾಸನ ಡಿಸ್ಟ್ರಿಕ್ಟ್, ಕಡೂರು ಡಿಸ್ಟ್ರಿಕ್ಟ್, ಚಿತ್ರದುರ್ಗ ಡಿಸ್ಟ್ರಿಕ್ಟ್ ಮತ್ತು ತಮಕೂರು ಡಿಸ್ಟ್ರಿಕ್ಟ್ Prohibited area ಇಲ್ಲವೇ ?

ಶ್ರೀ ಟಿ. ಚನ್ನಯ್ಯ.—ಹಾಸನ ಡಿಸ್ಟ್ರಿಕ್ಟ್ ಪೂರ್ತ Prohibition ಇಲ್ಲ.

Sri B. HUTCHE GOWDA.—I mean the border of Arsikere—Belur Taluks.

ಶ್ರೀ ಟಿ. ಚನ್ನಯ್ಯ.—ಕಡೂರು ಡಿಸ್ಟ್ರಿಕ್ಟ್ ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟ್‌ಗಳಿವೆ.

ಶ್ರೀ ಬಿ. ಹುಚ್ಚೇಗೌಡ.—ಹಾಸನದಲ್ಲಿ ಬೇಲೂರು ತಾಲ್ಲೂಕ್, ಹೀಗೆ 4 ಡಿಸ್ಟ್ರಿಕ್ಟ್‌ಗಳ Prohibited ತಾಲ್ಲೂಕಿನ ಜನರು ಕುಡಿಯುವುದಕ್ಕೋಸ್ಕರ ಅಲ್ಲಲ್ಲಿ ಹೆಂಡದ ಅಂಗಡಿಗಳನ್ನು ಸರಹದ್ದಿನಲ್ಲಿಟ್ಟುಕೊಂಡಿದ್ದಾರೆಯೇ ?

ಶ್ರೀ ಟಿ. ಚನ್ನಯ್ಯ.—ಅವರು ಬಂದು ಕುಡಿಯಬೇಕೆಂಬ ಉದ್ದೇಶದಿಂದ ಏರ್ಪಾಡು ಮಾಡಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ನಾಲ್ಕು ಡಿಸ್ಟ್ರಿಕ್ಟ್‌ಗಳ ಮಧ್ಯೆ ಇದನ್ನು ಉಳಿಸಿಕೊಂಡಿರಬೇಕಾಗಿದ್ದರೆ, ದುಡ್ಡು ಸರ್ಕಾರಕ್ಕೆ ಲುಕ್ಸಾನು ಆಗುತ್ತದೆ, ಆದ್ದರಿಂದ

illicit ಸಾಗಾಣಿಕೆಗೆ ಆಸ್ಪದವಿರಲು ಎಂದು ಈ ರೀತಿ ಮಾಡಿದ್ದಾರೆಯೇ?

ಶ್ರೀ ಟಿ. ಚನ್ನಯ್ಯ.—ಆ ಉದ್ದೇಶವಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ತುಮಕೂರಿಗೆ ಹೋಗ ಬೇಕಾದರೆ ಮಧ್ಯೆ ಅರಸೀಕೆರೆಯಲ್ಲಿ ಕುಡಿದುಹೋಗುವುದಕ್ಕೆ ಆಸ್ಪದವಾಗುವುದಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಅದನ್ನು ತಪ್ಪಿಸುವುದಕ್ಕೆ ಆಗುವುದಿಲ್ಲ. ಕೋಲಾರ ಡಿಸ್ಟ್ರಿಕ್ಟ್‌ನಲ್ಲಿ Prohibition ಇದೆ. ಅಲ್ಲಿಂದ ಚಿತ್ರದುರ್ಗಕ್ಕೆ ಹೋಗಬೇಕಾದರೆ ಬೆಂಗಳೂರಿನಲ್ಲಿ ಕುಡಿದುಬಿಟ್ಟು ಚಿತ್ರದುರ್ಗಕ್ಕೆ ಹೋಗುವುದಕ್ಕೆ ಆಗುವುದಿಲ್ಲವೆ?

ಶ್ರೀ ಬಿ. ಹುಚ್ಚೇಗೌಡ.—ಇದು ಒಂದೇ ಒಂದು ತಾಲ್ಲೂಕು; 12 ಮೈಲಿಗಳ ಸುತ್ತ ನಾಲ್ಕು ಡಿಸ್ಟ್ರಿಕ್ಟ್‌ಗಳ Prohibited area ಇದೆ. ಇದು ಒಂದು ತಾಲ್ಲೂಕಿನಲ್ಲೇ ಹೆಂಡದ ಅಂಗಡಿಗಳನ್ನು ಉಳಿಸಿಕೊಳ್ಳಬೇಕಾದರೆ ಏನು ಕಾರಣ? ಬೆಂಗಳೂರಿನಿಂದ ಚಿತ್ರದುರ್ಗಕ್ಕೆ ಹೋಗುವುದಕ್ಕೆ ತುಮಕೂರು ಬಿಟ್ಟು ಹೋದರೆ ಮುಂದೆ Prohibited area ಇದೆ. ಆದ್ದರಿಂದ ಅದನ್ನು ಮುಚ್ಚುವುದಕ್ಕೆ ಸರ್ಕಾರದವರು ಆಲೋಚನೆ ಮಾಡುತ್ತಾರೆಯೇ?

ಶ್ರೀ ಟಿ. ಚನ್ನಯ್ಯ.—ಸದ್ಯಕ್ಕೆ ಮುಚ್ಚುವುದಕ್ಕೆ ಸಾಧ್ಯವಿಲ್ಲ. ಅದು ಒಂದು Policy matter; ನಿಧಾನವಾಗಿ ಯೋಚನೆ ಮಾಡಬೇಕಾಗುತ್ತದೆ. Constitution ಪ್ರಕಾರ gradual ಆಗಿ Prohibition ಜಾರಿಗೆ ತರಬೇಕು ಎನ್ನತಕ್ಕಂಥ ನಿಯಮ ಇದ್ದೇ ಇದೆ. ಅದನ್ನು ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಬಿ. ಎ. ತಿಮ್ಮಪ್ಪಗೌಡ.—ಹಾಸನ ಜಿಲ್ಲೆಯಲ್ಲಿ ಪಾನನಿರೋಧ ಇದೆ. ಅರಕಲಗೂಡು—ಬೇಲೂರು ತಾಲ್ಲೂಕುಗಳ ಪಕ್ಕದಲ್ಲಿ ಒಂದು ಫರ್ಲಾಂಗ್ distance ನಲ್ಲಿ, ಗೊರೂರುವಗೈರೆ ಸ್ಥಳಗಳಲ್ಲಿ ಸೇಂದಿ ಅಂಗಡಿಗಳನ್ನು ನಡೆಸುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚನ್ನಯ್ಯ.—Excise ವಿಷಯದಲ್ಲಿ ಯಾವ ಯಾವ area ದಲ್ಲಿ ಅಂಗಡಿಗಳನ್ನು ಇಟ್ಟುಕೊಂಡು ನಡೆಸತಕ್ಕದ್ದು ಎಂಬುದನ್ನು ಮತ್ತು ಯಾವ ರೀತಿ ಅಂಗಡಿಗಳನ್ನು ನಡೆಸಬೇಕೆಂಬುದನ್ನು ಹರಾಜು ಇಸ್ತಿಹಾರ್ನಾಮೆಯಲ್ಲಿ ನಮೂದು ಮಾಡಿರುತ್ತಾರೆ.

ಶ್ರೀ ಬಿ. ಎ. ತಿಮ್ಮಪ್ಪಗೌಡ.—ಹೋದವರ್ಷ ಇಸ್ತಿಹಾರ್ನಾಮೆ ಹೊರಡಿಸುವುದಕ್ಕೆ ಮುಂಚೆ ಹಾಸನ ಜಿಲ್ಲೆಯಲ್ಲಿ Assembly ಸದಸ್ಯರು ಎಲ್ಲರೂ ಕೂಡ Border ನಲ್ಲಿರತಕ್ಕ ಅಂಗಡಿಗಳನ್ನು ತೆಗೆಯಬೇಕು ಎಂದು ಸರ್ಕಾರಕ್ಕೆ ಮನವಿಯನ್ನು ಕೊಟ್ಟಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಮನವಿಗಳನ್ನು ಕೊಟ್ಟನಂತರ ಕೆಲವು border shop ಗಳನ್ನು ತೆಗೆಯಲಾಗಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಎಲ್ಲೆಲ್ಲಿ ಹೆಚ್ಚಾಗಿ ಅಂಗಡಿಗಳನ್ನು ತೆಗೆಯಲಾಗಿದೆ?

ಶ್ರೀ ಟಿ. ಚನ್ನಯ್ಯ.—ನೋಟೀಸ್ ಬೇಕು.

ಶ್ರೀ ಬಿ. ಎಚ್. ಬೋರಣ್ಣಗೌಡ.—Five miles belt ಎಂದು ನಿಗದಿ ಏನಾದರೂ ಮಾಡೋಣವಾಗಿದೆಯೇ?

ಶ್ರೀ ಟಿ. ಚನ್ನಯ್ಯ.—Madras State Border belt area five miles distance ನಲ್ಲಿ ಯಾವ shop ನ್ನೂ ಇಡಕೂಡದೆಂದು ನಿಗದಿ ಮಾಡಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—Prohibition introduce ಮಾಡದೇ ಇರುವ area ಕ್ಕೂ Prohibited area ಕ್ಕೂ ಮಧ್ಯೆಯಿರುವ ಪ್ರದೇಶಕ್ಕೆ ಈ ರೂಲ್ ಅನ್ವಯಿಸುವುದಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಕೆಲವು ಸ್ಥಳಗಳಿಗೆ ಅನ್ವಯಿಸಿ ಇದೇ ರೀತಿ ಕೆಲವು shop ಗಳನ್ನು ತೆಗೆಯಲಾಗಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಬೇಲೂರಿಗೂ ಹಾಸನಕ್ಕೂ ಒಂದು ಅಡಿಯೂ ವ್ಯತ್ಯಾಸವಿಲ್ಲ. ಆದ್ದರಿಂದ ಹಾಸನದಲ್ಲಿ ಒಂದು ಅಡಿ ಆಚೆಯಿರುವ ಅಂಗಡಿಗಳನ್ನು ತೆಗೆಯುವುದಕ್ಕೆ ಪ್ರಯತ್ನಪಡುತ್ತಾರೆಯೇ?

ಶ್ರೀ ಟಿ. ಚನ್ನಯ್ಯ.—ಒಂದು ಅಡಿ, ಎರಡು ಅಡಿ ವ್ಯತ್ಯಾಸದಿಂದ ಏನಾಗುತ್ತದೆ?

Mr. SPEAKER.—The Point is that these shops have been located within a distance of one foot or two feet from the border.

ಶ್ರೀ ಟಿ. ಚನ್ನಯ್ಯ.—ಒಂದು ಫರ್ಲಾಂಗ್, ಎರಡು ಫರ್ಲಾಂಗ್, ಮೂರು ಫರ್ಲಾಂಗ್ ದೂರದಲ್ಲಿರತಕ್ಕಂಥ ಕೆಲವು ಅಂಗಡಿಗಳನ್ನೂ ಕೂಡ ಶ್ರೀ ಬೋರಣ್ಣಗೌಡರು representation ಕೊಟ್ಟಮೇಲೆ ಮುಚ್ಚಲಾಗಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—9 ಅಂಗಡಿಗಳನ್ನು ತೆಗೆಯಬೇಕೆಂದು ಹೇಳಿದರೆ ಎರಡು ಅಂಗಡಿಗಳನ್ನು ತೆಗೆದು 7 ಅಂಗಡಿಗಳನ್ನು ಇರಿಸಿದ್ದೀರಿ.

ಶ್ರೀ ಟಿ. ಚನ್ನಯ್ಯ.—ಕೊಟ್ಟ ಅಂಗಡಿಗಳನ್ನೆಲ್ಲಾ ಮುಚ್ಚುವುದಕ್ಕೆ ಸಾಧ್ಯವಿಲ್ಲ, ಎಷ್ಟು ಅಂಗಡಿಗಳನ್ನು ಮುಚ್ಚುವುದಕ್ಕೆ ಸಾಧ್ಯವೋ ಅಷ್ಟು ಅಂಗಡಿಗಳನ್ನು ಮುಚ್ಚಿದ್ದೇವೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಎಷ್ಟು ಅಂಗಡಿಗಳು Prohibited area ದ ಒಳಗಡೆ ಸೇರುವುದಿಲ್ಲ?

ಶ್ರೀ ಟಿ. ಚನ್ನಯ್ಯ.—ಎಲ್ಲ ವಿಚಾರಗಳನ್ನೂ ಪರ್ಯಾಲೋಚಿಸಿ ಸಾಧ್ಯವಾದಷ್ಟು ಅಂಗಡಿಗಳನ್ನ ಮುಚ್ಚಲಾಗಿದೆ. ಇನ್ನೂ ಕೆಲವನ್ನು ಮುಚ್ಚಲು ಯಾರಿಂದಲಾದರೂ Representation ಬಂದಮೇಲೆ ಅದನ್ನು consider ಮಾಡುತ್ತೇವೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಈ ಸಾರಿ ಹರಾಜು ಮಾಡುವುದರೊಳಗೆ representation ಬಂದರೆ ಅಂಗಡಿಗಳನ್ನು ಮುಚ್ಚುವುದಕ್ಕೆ ಭರವಸೆ ಕೊಡುತ್ತೀರಾ?

ಶ್ರೀ ಟಿ. ಚನ್ನಯ್ಯ.—ಭರವಸೆ ಕೊಡುವುದಕ್ಕಾಗುವುದಿಲ್ಲ.

ಶ್ರೀ ಗಂಗಾನಾಯಕ್.—ಕಳ್ಳಬಟ್ಟಿ ಕೇಸುಗಳನ್ನು ಪೋಲೀಸಿನವರು ಹಿಡಿಯುವುದಕ್ಕೆ ಹೋಗುತ್ತಾರೆಯೇ?

ಶ್ರೀ ಟಿ. ಚನ್ನಯ್ಯ.—ಹಿಡಿಯುತ್ತಾರೆ. ಮಾಲು ಸಿಕ್ಕಿದರೆ ಅವರನ್ನು ಹಿಡಿದುಕೊಂಡು ಬರುತ್ತಾರೆ.

ಶ್ರೀ ಗಂಗಾನಾಯಕ್.—ಕಳ್ಳಬಟ್ಟಿ ಮಾಲು ಸಿಕ್ಕದಿದ್ದರೆ ಹೆಂಗಸರನ್ನೇ ಹಿಡಿದುಕೊಂಡು ಹೋಗುತ್ತಾರೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

Mr. SPEAKER.—That question does not arise.

ಶ್ರೀ ಟಿ. ಚನ್ನಯ್ಯ.—ಶ್ರೀ ಗಂಗಾನಾಯಕರು ಹೇಳಿದ್ದನ್ನು ವಿಚಾರಮಾಡಲಾಗುತ್ತದೆ.

Minor Forests in Ramanagaram Sub-Division.

Q.—16. Sri S. KARIAPPA (Virupakshapura).—